ಆ) ತುಳು ಸಾಹಿತ್ಯ ಅಕಾಡೆಮಿಗೆ ಈ ತನಕ ಒಟ್ಟು ಒದಗಿಸಿದ ಅನುದಾನ ಎಷ್ಟು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು):

ಅ) 1) ಮಾಸಾಶನ-780 ಜನರಿಗೆ

2) ಗೌರವಧನ- 144 ಜನರಿಗೆ

3) ವೈದ್ಯಕೀಯ ನೆರವು 17 ಜನರಿಗೆ ನೀಡಲಾಗಿದೆ.

4) 16 ಅರ್ಜಿಗಳು ಪರಿಶೀಲನೆಯಲ್ಲಿದೆ.

ಸದ್ಯದಲ್ಲಿ ಇತ್ಯರ್ಥಗೊಳಿಸಲಾಗುವುದು.

ಆ) ಈ ತನಕ ಒಟ್ಟು ರೂ. 51.00 ಲಕ್ಷ ಅನುದಾನ ನೀಡಲಾಗಿದೆ.

ಬಾಲಕಾರ್ಮಿಕರ ಯೋಜನೆ ಜಾರಿ.

103(249)

ಶ್ರೀ ಎನ್.ಸಂಪಂಗಿ (ಬಾಗೇಪಲ್ಲಿ): ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಎ) ಬಾಲ ಕಾರ್ಮಿಕರ ಉದ್ಯೋಗ ನಿಷೇಧವು ಯಾವ ದಿನಾಂಕದಿಂದ ಜಾರಿಗೆ ಬಂದಿರುತ್ತದೆ?

ಬಿ) ಯಾವುದೇ ಕಾರ್ಖಾನೆಗಳು ಅಥವಾ ಖಾಸಗಿ ಸಂಸ್ಥೆಯ ಆಡಳಿತವರ್ಗದವರು ಬಾಲ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯನ್ನು ಉಲ್ಲಂಘನೆ ಮಾಡಿರುತ್ತಾರೆಯೇ?

ಸಿ) ಹಾಗಿದ್ದಲ್ಲಿ ಸದರಿ ಸಂಸ್ಥೆಗಳ ವಿರುದ್ಧ ಎಷ್ಟು ಮೊಕದ್ದಮೆಗಳನ್ನು ಕಳೆದ 3 ವರ್ಷಗಳಲ್ಲಿ ಕಾರ್ಖಾನೆಗಳು ಆಡಳಿತವರ್ಗದವರ ವಿರುದ್ಧ ಹೂಡಲಾಗಿರುತ್ತದೆ?

ಡಿ) ವಿಶೇಷವಾಗಿ ಬೆಂಗಳೂರು ನಗರದಲ್ಲಿರುವ ಬಹುತೇಕ ಹೋಟೆಲ್‌ಗಳಲ್ಲಿ 14 ವರ್ಷದೊಳಗಿನ ಮಕ್ಕಳನ್ನು ಸ್ವಚ್ಛತೆ ಮತ್ತು ವಿತರಣೆಗೆ ಉದ್ಯೋಗದಲ್ಲಿ ತೊಡಗಿಸಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಸದರಿ ಹೋಟೆಲ್‌ಗಳ ಆಡಳಿತವರ್ಗದವರ ವಿರುದ್ಧ ಸರ್ಕಾರವು

ತೆಗೆದುಕೊಂಡಿರುವ ಕ್ರಮಗಳೇನು? (ಕಳೆದ 3 ವರ್ಷಗಳ ಮಾಹಿತಿಯನ್ನು ಸಲ್ಲಿಸುವುದು)

ಶ್ರೀ ಎ.ಎಂ ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

ಎ) ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ದಿನಾಂಕ 23-12-1986 ರಿಂದ ಜಾರಿಗೆ ಬಂದಿರುತ್ತದೆ.

ಬಿ) ಹೌದು.

ಸಿ) ಕೆಲವೊಂದು ಕಾರ್ಖಾನೆಗಳು ಖಾಸಗಿ ಸಂಸ್ಥೆಗಳ ಆಡಳಿತವರ್ಗದವರ ವಿರುದ್ಧ ಕಳೆದ 3 ವರ್ಷಗಳಲ್ಲಿ 406 ಮೊಕದ್ದಮೆಗಳನ್ನು ಹೂಡಲಾಗಿದೆ.

ಡಿ) ಬೆಂಗಳೂರು ನಗರದಲ್ಲಿ ಬಹುತೇಕ ಹೋಟೆಲ್‌ಗಳಲ್ಲಿ 14 ವರ್ಷದೊಳಗಿನ ಮಕ್ಕಳನ್ನು ನೇಮಕ ಮಾಡಿಕೊಂಡಿದ್ದಾರೆಂದು ಹೇಳುವುದು ಸರಿಯಲ್ಲ. ಆದರೆ, ಕೆಲವೊಂದು ಹೋಟೆಲ್‌ಗಳಲ್ಲಿ ನೇಮಕ ಮಾಡಿಕೊಂಡಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಅಂತಹ ಹೋಟೆಲ್‌ಗಳ ವಿರುದ್ಧ ಕಾಯ್ದೆಯ ಪ್ರಕಾರ ಕ್ರಮಗಳನ್ನು ಜಾರಿಗೊಳಿಸಲಾಗಿದೆ.

ಇ) ಬೆಂಗಳೂರಿನ ಹೋಟೆಲ್ ಸಂಸ್ಥೆಗಳಲ್ಲಿ 1904 ತಪಾಸಣೆಗಳನ್ನು ಕೈಗೊಂಡು ತಪ್ಪಿತಸ್ಥ ಹೋಟೆಲ್ ಆಡಳಿತವರ್ಗದವರ ವಿರುದ್ಧ 15 ಮೊಕದ್ದಮೆಗಳನ್ನು ಹೂಡಲಾಗಿದೆ.

ಲೋಕೋಪಯೋಗಿ ಇಲಾಖೆಯಲ್ಲಿ ವಿಚಾರಣೆ ಆಯೋಗಗಳು.

104(396)

ಕೆ.ಎನ್.ಸುಬ್ಬಾರೆಡ್ಡಿ(ಬಸವನಗುಡಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಲೋಕೋಪಯೋಗಿ ಇಲಾಖೆಯ ಬಗ್ಗೆ ವಿಚಾರಣಾ ಆಯೋಗಗಳನ್ನೇನಾದರೂ ಈ ಹಿಂದೆ ಸರ್ಕಾರ ರಚಿಸಿತ್ತೇ? ಹಾಗಿದ್ದಲ್ಲಿ ಆ ಆಯೋಗಗಳು ಯಾವುವು, ಮತ್ತು ವರದಿಗಳನ್ನು ಏನಾದರೂ ಸರ್ಕಾರ ಸ್ವೀಕರಿಸಿದೆಯೇ?

ಆ) ಸ್ವೀಕರಿಸಿದ್ದರೆ ಆಯೋಗದ ಮುಖ್ಯ ಸಾರಾಂಶಗಳೇನು?